Test Paper : **II**

Test Subject : **KANNADA**

Test Subject Code : **K-0218**

Roll No. | | | | | | | |

(Figures as per admission card)

OMR Sheet No. : ________________

TEST BOOKLET SERIAL NO.

**Name & Signature of Invigilator/s**

Signature : ______________________________

Name : ______________________________

Time : 2 Hours　　　　Maximum Marks : 200

Number of Pages in this Booklet : **24**　　　　Number of Questions in this Booklet : **100**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ನೂರು (100) ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪಶ್ನೆಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.

   **ಉದಾಹರಣೆ** : (A) (B) ● (D)

   (C) ಸರಿಯಾದ ಉತ್ತರವಾಗಿದ್ದಾಗ.
5. ಈ ಪ್ರಶ್ನೆ ಪತ್ರಿಕೆಯ ಜೊತೆಯಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು**. OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMRನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of Hundred multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.

   **Example** : (A) (B) ● (D)

   where (C) is the correct response.
5. Your responses to the questions are to be indicated in the **OMR Sheet kept inside this Booklet.** If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ಕನ್ನಡ

## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **ನೂರು (100)** ವಸ್ತುನಿಷ್ಠ ಮಾದರಿಯ ಪ್ರಶ್ನೆಯನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ''ಬೂತುಗಂ ರಾಜಾದಿತ್ಯನಂ ಬಿಸುಗೆಯೆ ಕಳನಾಗಿ ಸುರಿಗಿಱಿದು ಕಾದಿ ಕೊನ್ದು'' ಎಂಬ ಮಾತು ಈ ಶಾಸನದಲ್ಲಿ ಬರುತ್ತದೆ.

(A) ಬಾದಾಮಿ ಶಾಸನ

(B) ಆತಕೂರು ಶಾಸನ

(C) ದೇಕಬ್ಬೆ ಶಾಸನ

(D) ಗಂಗಾಧರಂ ಶಾಸನ

**2.** ಜೈನ ಶಾಸನಗಳಲ್ಲಿ ಕಂಡುಬರುವ

''ಶ್ರೀಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಮ್ ಜೀಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ'' ಈ ಶ್ಲೋಕವು ಇವರದು

(A) ಭಟ್ಟನಾರಾಯಣ

(B) ಬಾಣಭಟ್ಟ

(C) ಅಕಲಂಕ

(D) ಕವಿರಾಜಮಾರ್ಗಕಾರ

**3.** ಕನ್ಯೆಯ, ಬಂಟನ, ವೃದ್ಧೆಯ ಚಿತ್ರಗಳನ್ನು ಪಟದಲ್ಲಿ ತೋರಿಸಿ ಮೋಸಗೊಳಿಸುತ್ತಿದ್ದುದು ಈ ಕಥೆಯಲ್ಲಿದೆ.

(A) ಸುಕುಮಾರಸ್ವಾಮಿಯ ಕಥೆ

(B) ಕಾರ್ತಿಕ ರಿಸಿಯ ಕಥೆ

(C) ವಿದ್ಯುಚ್ಚೋರನೆಂಬ ರಿಸಿಯ ಕಥೆ

(D) ಚಾಣಕ್ಯ ರಿಸಿಯ ಕಥೆ

**4.** ಶ್ರೀವಿಜಯನೆಂಬ ಕವಿ ಬರೆದ ಕೃತಿಯ ಹೆಸರು ಇಂತಿದೆ

(A) ರಘುವಂಶ ಮಹಾಪುರಾಣ

(B) ಕೌಶಿಕ ರಾಮಾಯಣ

(C) ರಾಮಚಂದ್ರಚರಿತ ಪುರಾಣ

(D) ತೊರವೆ ರಾಮಾಯಣ

**5.** Tract on sacrifice (ಯಜ್ಞಸುಧಾನಿಧಿ)ಯನ್ನು ಬರೆದವರು

(A) ಮೊಗ್ಲಿಂಗ್

(B) ಕಿಟ್ಟೆಲ್

(C) ಬಿ. ಎಲ್. ರೈಸ್

(D) ಜೆ. ಎಫ್. ಫ್ಲೀಟ್

**6.** ಬಿ. ವೆಂಕಟಾಚಾರ್ಯರು ಅನುವಾದಿಸಿದ ಈಶ್ವರಚಂದ್ರ ವಿದ್ಯಾಸಾಗರರ ಬಂಗಾಳಿ ಕೃತಿ – ''ಭ್ರಾಂತಿವಿಲಾಸ'' ಎಂಬುದರ ಮೂಲ

(A) ದಿ ಮರ್ಚೆಂಟ್ ಆಫ್ ವೆನಿಸ್

(B) ದಿ ಕಾಮೆಡಿ ಆಫ್ ಎರರ್ಸ್

(C) ಕಿಂಗ್ ಲಿಯರ್

(D) ಎ ಮಿಡ್ ಸಮರ್ ನೈಟ್ಸ್ ಡ್ರೀಮ್

7. ‘The Metamorphosis’ – ಕೃತಿಯ ಕರ್ತೃ

(A) ಫ್ರಾಂಜ್ ಕಾಫ್ಕಾ

(B) ಕಾಮೂ

(C) ಬ್ರೆಕ್ಟ್

(D) ನೀಷೆ

8. ಪೊಟ್ಟೋಳೆ ಪೊಳವ ಎಂಬ ಜಾನಪದ ಕೃತಿಯ ಸಂಗ್ರಹಕಾರ

(A) ಹಲಸಂಗಿ ಗೆಳೆಯರು

(B) ನಡಕೇರಿಯಂಡ ಚಿಣ್ಣಪ್ಪ

(C) ಗೆಳೆಯರ ಗುಂಪು

(D) ಜಿ. ಶಂ. ಪರಮಶಿವಯ್ಯ

9. ‘ಕೈದೊಳೆ’ ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(A) ಆದೇಶಸಂಧಿ

(B) ಲೋಪಸಂಧಿ

(C) ಆಗಮಸಂಧಿ

(D) ಜಶ್ತ್ವಸಂಧಿ

10. ‘ಜಲಪಾನಂಗೆಯ್ದು’ ಪದವನ್ನು ವಿಗ್ರಹಿಸಿ ಬರೆದಾಗ

(A) ಜಲಪಾನಮಂ + ಗೆಯ್ದು

(B) ಜಲಪಾನಂ + ಗೆಯ್ದು

(C) ಜಲಪಾನ + ಗೆಯ್ದು

(D) ಜಲಪಾನದೊಳ್ + ಗೆಯ್ದು

11. ‘ಸರ್ ಸಾಲಾರ್ ಜಂಗ್‌ನ ಚರಿತ್ರೆ’ ಎಂಬ ಕೃತಿಯನ್ನು ಬರೆದವರು

(A) ಎಂ. ಎನ್. ಕಾಮತ್

(B) ಎಂ. ಎಸ್. ಪುಟ್ಟಣ್ಣ

(C) ಕೆರೂರು ವಾಸುದೇವಾಚಾರ್ಯ

(D) ಗುಳವಾಡಿ ವೆಂಕಟರಾಯ

12. ‘ತಾವರೆಯ ಕೊಳ’ ಇದು

(A) ಕಾದಂಬರಿ

(B) ಕಥೆ

(C) ಪ್ರಬಂಧ

(D) ಪ್ರವಾಸಕಥನ

13. ಸಾಂಸ್ಕೃತಿಕ ಯಾಜಮಾನ್ಯ (Cultural Hegemony) ಪರಿಕಲ್ಪನೆ ರೂಪಿಸಿದವರು

(A) ಕಾರ್ಲ್‌ಮಾರ್ಕ್ಸ್

(B) ರೇಮಂಡ್ ವಿಲಿಯಮ್ಸ್

(C) ಲೂಯಿ ಆಲ್ತೂಸೆ

(D) ಆಂಟೊನಿಯೊ ಗ್ರಾಮ್ಸಿ

14. ‘ದಿ ಡೆತ್ ಆಫ್ ದಿ ಆಥರ್’ ಇದನ್ನು ಪ್ರತಿಪಾದಿಸಿದವರು

(A) ರೊಲಾ ಬಾರ್ಥ್

(B) ಜಾಕ್ಸ್ ಡೆರಿಡಾ

(C) ಮೈಕೆಲ್ ಫುಕೊ

(D) ಎಡ್ವರ್ಡ್ ಸಯೀದ್

**15.** 'ಮೈಯುಡುಗಿಸಿದನು' ಇದು ಯಾವ ಸಮಾಸ ?

(A) ಕ್ರಿಯಾ ಸಮಾಸ

(B) ಗಮಕ ಸಮಾಸ

(C) ದ್ವಿಗು ಸಮಾಸ

(D) ದ್ವಂದ್ವ ಸಮಾಸ

**16.** ಕಂದದ ಭೇದಗಳಲ್ಲಿ ಇದೂ ಒಂದು

(A) ಅವಸ್ಕಂಧ

(B) ಉನ್ನತ ಕಂದ

(C) ಪೂರ್ವ ಕಂದ

(D) ಉತ್ತರ ಕಂದ

**17.** 'ಬೆಳೆವೊಲಂ' – ಎಂಬುದು ಈ ಸಂಧಿಗೆ ಉದಾಹರಣೆ

(A) ಆದೇಶಸಂಧಿ

(B) ಲೋಪಸಂಧಿ

(C) ಗುಣಸಂಧಿ

(D) ಆಗಮಸಂಧಿ

**18.** ''ಮಧುಮಾಸ ಬಂದಿತೆನೆ

ನರುಗಂಪು ಸೂಸಿತೆನೆ'' – ಇದರಲ್ಲಿಯ ಛಂದೋಲಯ

(A) ಮೂರು ಮಾತ್ರಾಲಯ

(B) ನಾಲ್ಕು ಮಾತ್ರಾಲಯ

(C) ಐದು ಮಾತ್ರಾಲಯ

(D) ಆರು ಮಾತ್ರಾಲಯ

**19.** ''ಕುಲಚಲಕೆಲ್ಲ ಹೋರಾಡಿ ನೆಲಗತ್ತಲಾಗುವ

ಚಲಮಾರಿಗಳೆಲ್ಲ ಪಂಡಿತರೆ'' – ಎಂದು ಹೇಳಿದವರು

(A) ಕೂಡಲೂರು ಬಸವಲಿಂಗ ಶರಣರು

(B) ನಿಜಗುಣ ಶಿವಯೋಗಿಗಳು

(C) ಮುಪ್ಪಿನ ಷಡಕ್ಷರಿ

(D) ಶಿಶುನಾಳ ಷರೀಫ

**20.** ''ಇಂದೊ ನಾಳೆಯೋ ದಾಸನೀಶನಾಗಲೆಬೇಕು

ಎಂದಿಂದೆ ಎದ್ದೇಳಿ ನಾಳೆಯೆನೆ ಹೋಕು'' – ಇವು ಈ ಕವಿಯ ಸಾಲುಗಳು

(A) ಗೋವಿಂದ ಪೈ

(B) ಪಂಜೆ ಮಂಗೇಶರಾಯ

(C) ದ. ರಾ. ಬೇಂದ್ರೆ

(D) ಕುವೆಂಪು

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

**21.** ಇವು ಚಂಪೂ ಕಾವ್ಯಗಳು

a. ಕುಸುಮಾವಳಿ ಮತ್ತು ಸಮ್ಯಕ್ತ್ವ ಕೌಮುದಿ

b. ಶಾಂತಿಪುರಾಣ ಮತ್ತು ಶ್ರೀಪಾಲಚರಿತೆ

c. ನೇಮಿನಾಥ ಪುರಾಣ ಮತ್ತು ಪುಣ್ಯಾಸ್ರವ

d. ಮನ್ಮಥ ವಿಜಯ ಮತ್ತು ನನ್ನಯ್ಯಗಳ ಚಾರಿತ್ರ್ಯ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) a ಮತ್ತು c

(C) b ಮತ್ತು d

(D) c ಮತ್ತು d

**22.** ಇವು ಅರ್ಥಾಲಂಕಾರಗಳು

a. ಚಿತ್ರಕವಿತ್ವ ಮತ್ತು ಛೇಕಾನುಪ್ರಾಸ

b. ರೂಪಕ ಮತ್ತು ದೀಪಕ

c. ಯಮಕ ಮತ್ತು ವೃತ್ಯನುಪ್ರಾಸ

d. ಉತ್ಪ್ರೇಕ್ಷಾ ಮತ್ತು ಉಪಮಾ

**ಇವುಗಳಲ್ಲಿ ಸರಿಯಾದ ಉತ್ತರ :**

(A) b ಮತ್ತು d

(B) a ಮತ್ತು c

(C) a ಮತ್ತು b

(D) b ಮತ್ತು c

**23.** ಇವು ಸರಿಯಾದ ಹೊಂದಾಣಿಕೆ

a. ಪ್ರ. ಗೋ. ಕುಲಕರ್ಣಿ – ಕನ್ನಡ ನುಡಿಯ ಹಿನ್ನಡವಳಿ

b. ಕೆ. ಎಂ. ಕೃಷ್ಣರಾವ್ – ಕನ್ನಡ ಭಾಷೆಯ ಸ್ವರೂಪ

c. ಡಿ. ಎನ್. ಶಂಕರ ಬಟ್ – ಕನ್ನಡ ಭಾಷೆಯ ಚರಿತ್ರೆ

d. ವಿಲ್ಯಂ ಮಾಡ್ತ – ಕನ್ನಡ ಭಾಷೆಯ ರೂಪರೇಷೆಗಳು

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) a ಮತ್ತು d

(C) b ಮತ್ತು d

(D) a ಮತ್ತು c

**24.** ಇವು ಸರಿಯಾದ ಹೊಂದಾಣಿಕೆಯಲ್ಲ

a. ಭೋಜರಾಜ – ಶೃಂಗಾರ ಪ್ರಕಾಶ

b. ಪ್ರಭಾಕರ – ರಸಮಂಜರಿ

c. ಗೋವಿಂದ – ಕಾವ್ಯಪ್ರದೀಪ

d. ಭಾನುದತ್ತ – ಕವಿಕಂಠಾಭರಣ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) a ಮತ್ತು c

(C) b ಮತ್ತು c

(D) b ಮತ್ತು d

**25.** ಇವರು ವೀರಶೈವ ಚಂಪೂ ಕವಿಗಳು

a. ದೇವಕವಿ ಮತ್ತು ಹರಿಹರ

b. ಮಹಾಬಲ ಮತ್ತು ಶಾಂತವೀರ ದೇಶಿಕ

c. ಚಂದ್ರಕವಿ ಮತ್ತು ಷಡಕ್ಷರ

d. ಸೋಮರಾಜ ಮತ್ತು ಕವಿಮಾದಣ್ಣ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

**26.** a. ಕಂಸಾಳೆಯವರು – ಮಲೆಮಾದೇಶ್ವರ ಕಾವ್ಯ

b. ನೀಲಗಾರರು – ಮಂಟೇಸ್ವಾಮಿ ಕಾವ್ಯ

c. ಕಿಳ್ಳೆಕ್ಯಾತರು – ಕತೆ ಹೇಳುವ ವೃತ್ತಿಕಲಾವಿದರು

d. ಗೊಂದಲಿಗರು – ಸೂತ್ರದ ಗೊಂಬೆಯಾಟ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b (B) b ಮತ್ತು c

(C) c ಮತ್ತು d (D) a ಮತ್ತು d

**27.** ಭಾಷಾಂತರಿತ ಶಬ್ದಗಳಿಗೆ ಉದಾಹರಣೆಗಳು

a. ಕಲ್ಲೆಣ್ಣೆ

b. ಬಿಸ್ಕತ್ತು

c. ಒತ್ತುಕಾಗದ

d. ಸಿಮೆಂಟು

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b (B) b ಮತ್ತು c

(C) a ಮತ್ತು c (D) b ಮತ್ತು d

**28.** ಇವು ವಿಜಯಾದಬ್ಬೆಯವರ ಕೃತಿಗಳಲ್ಲ

a. ಸವತಿ ಶ್ರೀಗಂಧ

b. ಆಕಾಶಕ್ಕೆ ನೀಲಿ ಪರದೆ

c. ತಿರುಗಿ ನಿಂತ ಪ್ರಶ್ನೆ

d. ಉರಿಯ ಚಿಗುರು ಉತ್ಕಲೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b (B) b ಮತ್ತು c

(C) c ಮತ್ತು d (D) a ಮತ್ತು c

**29.** a. ದುರ್ಯೋಧನ – ಛಲ

b. ಶಲ್ಯ – ದಾನ

c. ಭೀಷ್ಮ – ಔನ್ನತ್ಯ

d. ದ್ರೋಣ – ಸಾಹಸ

**ಇವುಗಳಲ್ಲಿ ಸರಿಯಾದ ಜೋಡಿಗಳು :**

(A) a ಮತ್ತು b

(B) a ಮತ್ತು c

(C) b ಮತ್ತು c

(D) c ಮತ್ತು d

**30.** ಧ್ವನ್ಯಂಗಗಳಲ್ಲಿ ಇವುಗಳನ್ನು ಕರಣಗಳೆಂದು ಗುರುತಿಸುವರು

a. ನಾಸಿಕ

b. ನಾಲಿಗೆ

c. ಕೆಳ ದವಡೆ

d. ತಾಲು

**ಇವುಗಳಲ್ಲಿ ಸರಿಯಾದ ಉತ್ತರಗಳು :**

(A) a ಮತ್ತು b

(B) b ಮತ್ತು c

(C) c ಮತ್ತು d

(D) a ಮತ್ತು d

**31.** ಭಾಷಾಂತರ ಸ್ವೀಕರಣಕ್ಕೆ ಇವು ಉದಾಹರಣೆಗಳು

a. ಶೀತಲ ಸಮರ

b. ಮುನ್ನುಡಿ

c. ಆಟಂ ಬಾಂಬು

d. ಬಸ್ಸು

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) a ಮತ್ತು c

(D) b ಮತ್ತು d

**32.** ಇವುಗಳಲ್ಲಿ ಯಾವವು ತಪ್ಪು ಹೊಂದಾಣಿಕೆಗಳು

a. ''ನಮಗಕ್ಕಿಗೊಟ್ಟು ಮಡುಗೂಟುಣ್ಬಂದಮಂ ಪೋಲದೇ'' – ಆದಿಪುರಾಣ

b. ''ಪುಟ್ಟಲೊಡಂ ಸಾಯಲ್ಕಡಿಯಿಟ್ಟಪ್ಪುದು ಸಾಯಲೊಡನೆ ಪುಟ್ಟಲ್ ನೆಱೆಗುಂ'' – ವರ್ಧಮಾನ ಪುರಾಣ

c. ''ಬೆಲೆಯಿಂದಕ್ಕುಮೆ ಕೃತಿ ಗಾ – ವಿಲ ಭುವನ ಭಾಗ್ಯದಿಂದಮಕ್ಕುಂ'' – ಶಾಂತಿಪುರಾಣ

d. ''ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು'' – ಮಲ್ಲಿನಾಥ ಪುರಾಣ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) c ಮತ್ತು d

(D) b ಮತ್ತು d

**33.** ಸರಿಯಾದ ಜೋಡಿಗಳನ್ನು ಗುರುತಿಸಿ :

a. ವಿರತಿಯ ಸಿರಿಸಪ್ಪಣ್ಣನವರು – ಜಿ. ಎಸ್. ಸಿದ್ಧಲಿಂಗಯ್ಯ

b. ಮಹಮ್ಮದ್ ಪೈಗಂಬರ್ – ಜಿ. ಪಿ. ರಾಜರತ್ನಂ

c. ರೇಖಾ ಚಿತ್ರಗಳು – ತ. ರಾ. ಸು

d. ಯೇಸುಕ್ರಿಸ್ತ – ಹಾ. ಮಾ. ನಾಯಕ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) a ಮತ್ತು c

(D) a ಮತ್ತು d

**34.** ಇವುಗಳಲ್ಲಿ ಸರಿಯಾದ ಹೊಂದಿಕೆಗಳನ್ನು ಗುರುತಿಸಿ :

a. ಅಜ್ಞಾತ ಮುಂಬಯಿ – ರಾಘವೇಂದ್ರ ಪಾಟೀಲ

b. ಶ್ರೀಗಿರಿಯಿಂದ ಹಿಮಗಿರಿಗೆ – ವಿ. ಕೃ. ಗೋಕಾಕ್

c. ಐಷಾರಾಮದ ಆಳದಲ್ಲಿ – ಸಾರಾ ಅಬುಬಕರ್

d. ಪಯಣಿಗ – ಶಾಂತದೇವಿ ಮಾಳವಾಡ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) c ಮತ್ತು d

(D) a ಮತ್ತು c

35. ಶಾಸನಗಳಲ್ಲಿ ಬರುವ 'ದಾನಚ್ಛೇದೋಪವರ್ಣನಂ' ಎಂಬುದರ ಅರ್ಥ

a. ದಾನ ನೀಡುವವರ ವಂಶಾವಳಿಯ ವರ್ಣನೆ

b. ದಾನ ಕೊಟ್ಟ ಭೂಮಿಯ ಮೇರೆಗಳ ಸೂಚನೆ

c. ದಾನ ಪಡೆದ ವ್ಯಕ್ತಿಯ ಗುಣವರ್ಣನೆ

d. ದಾನವನ್ನು ಅಪಹರಿಸಿದವರಿಗೆ ನೀಡುವ ಶಾಪ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) b ಮತ್ತು d

(D) a ಮತ್ತು d

36. ಇವುಗಳಲ್ಲಿ ಸರಿಯಾದ ಜೋಡಿಗಳು :

a. ನಿಲ್ಲುನಿಲ್ಲೆಲೆ ನವಿಲೆ, ನಿನ್ನ ಕಣ್ಣುಗಳೇಸು ಕಣ್ಣಬಣ್ಣಗಳೇಸು ಎಣಿಸಲಾರೆ – ಮಧುರಚೆನ್ನ

b. ಅಲ್ಲಿದ್ದುದು ಬೆಳಕೆಂಬುವುದಲ್ಲ ಕತ್ತಲು ಅಲ್ಲ ಬೆಳಕೋ ಕತ್ತಲೋ ಶಿವನೇ ಬಲ್ಲ – ಕುವೆಂಪು

c. ಅಡಿಮುಡಿಗಳ ತುಟಿಕಟಿಗಳ ಮಿಡಿದುಹಿಡಿದು ನೋಡುತಿರಲು ಮರ್ಮ ಕೆಣಕಿ ನೋಡಿದಂತೆ – ಕರ್ಮ ಕುದಿಗೆ ಬಂದಿತೋ – ಗೋಪಾಲಕೃಷ್ಣ ಅಡಿಗ

d. ಹೆತ್ತು ಸುಸ್ತಾದದ್ದೆ ನಿನ್ನ ನಂಬಿದ ಲಾಭ
ಒರತೆ ಬತ್ತಿದ ಹಾಳುಬಾವಿ ಹಾಗೆ ಇರಬೇಕೆ ? –
ದ. ರಾ. ಬೇಂದ್ರೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b (B) a ಮತ್ತು c

(C) b ಮತ್ತು c (D) c ಮತ್ತು d

37. ಗೀತಾ ನಾಗಭೂಷಣರ ಕಾದಂಬರಿಗಳು

a. ಚಿಕ್ಕಿಯ ಹರೆಯದ ದಿನಗಳು

b. ಚಿತ್ತಿ ಮತ್ತು ರಿಕ್ಷಾ

c. ಅಭಿಮಾನ

d. ಜ್ವಲಂತ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) a ಮತ್ತು c

(D) a ಮತ್ತು d

38. 'ಮುದ್ರಾ ಮಂಜೂಷವು' ಕೃತಿಯ ಪಾತ್ರಗಳು

a. ಕ್ಷಪಣಕ

b. ವೇಗಶರ್ಮ

c. ಚಂದನ ಶರ್ಮ

d. ಚೂರ್ಣಿಕ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) a ಮತ್ತು c

(C) b ಮತ್ತು c

(D) b ಮತ್ತು d

**39.** ಎಚ್. ಎಲ್. ನಾಗೇಗೌಡರ ಕೃತಿಗಳು

a. ಬೆಟ್ಟದಿಂದ ಬಟ್ಟಲಿಗೆ

b. ಬಿತ್ತಿದ್ದೇ ಬೇವು

c. ಭವ್ಯ ಮಾನವ

d. ಸೊನ್ನೆಯಿಂದ ಸೊನ್ನೆಗೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) b ಮತ್ತು c

(C) c ಮತ್ತು d

(D) a ಮತ್ತು d

**40.** ಕನ್ನಡ ಭಾಷೆಯ ಪ್ರಾಚೀನತೆಯನ್ನು ಗುರುತಿಸಲು ಸಹಾಯಕವಾಗುವ ಪದಗಳು

a. ಕಣ್, ನೀರ್

b. ಚೆನ್, ಮಟಚಿ

c. ಅತ್ತಾ, ಪೊಟ್ಟೆ

d. ಅಪ್ಪ, ಅಕ್ಕ

**ಇವುಗಳಲ್ಲಿ ಸರಿಯಾದ ಉತ್ತರ :**

(A) a ಮತ್ತು b

(B) a ಮತ್ತು c

(C) b ಮತ್ತು c

(D) a ಮತ್ತು d

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ ಈ ಕೆಳಗಿನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ. (41ನೆಯ ಪ್ರಶ್ನೆಯಿಂದ 45ರವರೆಗೆ)**

ಪ್ರಾಣನಾಯಿಕೆ ! ಇಂತು ಭೂಜಾತೆ ಗರ್ಭಿಣಿಯಾದಳಾಗೆ, ನಾಡೆ ನಾಡೆ ಸಂತಸಗಡಲೊಳೋಲಾಡುತಿರ್ದುದು; ಬಂಧುಜನಂಗಳ ಸಮ್ಮೋದಮುಂ ಪರಿಜನಂಗಳುಕ್ಕೆವದೇಟ್ಗಿಯುಂ ಪಿರಿದಾಯ್ತು; ಎತ್ತಲು ಮೊಸಗೆವಱ ಮೊಟಗಿದತ್ತು; ಭೂಸುರರ್ ದಾನದಕ್ಷಿಣೆಗಳಿಂ ತಣಿದರ್; ನೆರೆದ ದೀನಾಂಧಬಧಿರಕುಬ್ಜವರ್ಗಂ ಸ್ವರ್ಗಸುಖಾನುಭವದೊಳಿರ್ದತ್ತು.

ಆ ವೇಳೆಯೊಳೊರ್ಮೆ ಶ್ರೀರಘುಪ್ರವರಂ ಕಾಂತೆವೆರಸು ಕಟ್ಟೇಕಾಂತದ ಸಲ್ಲಾಪದಿಂ ಬೈಗಿನೊಳ್ ರಾಣಿವಾಸದ ಮೊಗಸಾಲೆಯೊಳಿರೆ ಸೀತೆ ಕಾಂತಂಗೆ–ನಾಥ ! ಬಲ್ಬೇಸಱ್ ಕಣಾ ! ಆವುದುಮನೊಳಕೊಂಡಿತಿಲ್ಲೆನ್ನ ಮನಂ, ಅದಱುಂ ವನದೊಳಾಶ್ರಮಂಗಳ ಋಷಿಪತ್ನಿಯರಂ ಕಂಡು ಸುಖ ಸಲ್ಲಾಪಂಗೊಂಡವರೊಡನಾಟದಿನಾನುಂ ಕಿಱುದುಂ ದಿನಮಿರ್ದು ಮರಲ್ದು ಬರಲಕ್ಕುಮೆಂದು ಬಯಸುವೆನೆನೆ; ರಾಯಂ–ಅಂತೆಯೆ ಅಕ್ಕೆ ! ಆದೊಡೆ ಒರ್ವಳೆ ಪೋಪುದಲ್ತು; ಕೂಡಿ ಪೋಗೆ ಲಕ್ಷ್ಮಣನಂ ಪೇೞ್ದಟ್ಟುವೆನೆಂದು ಮಾರ್ನುಡಿದಂ.

ಆಗಳ್ ಸಪ್ತಾಶ್ವಂ ನಿಚ್ಚವಯಣದೊಳ್ ಬಲ್ಬಳಲ್ದಶ್ವಸಪ್ತಕಮಂ ಕಡಲೊಳ್ ಮಯ್ಗರ್ಚಿ ನೀರ್ಗುಡಿಸಲ್ಕೆಂದು ಸಾರಥಿಯನೇರ್ಪಡಿಸಿ ತಾಂ ತೇರಿನಿಟಿದನೆನೆ ಪಡುವೆಟ್ಟನೆಡೆಯೊಳ್ ಮೆಲ್ಲನೆ ಮೆಯ್ಗರೆಯಲೊಡಂ ಲೋಕಯಾತ್ರೆಗೈದು ಮನೆಯಂ ಪುಗುತರ್ಪಿನಿಯಂಗೆ ಚರಮದಿಕ್ಕಾಂತೆ ರನ್ನವಟ್ಟಲೊಳ್ ಪಿಂಗದೆತ್ತಿದಾರತಿಯ

ಕೆಂಬೆಳಗೆನೆ ಸಂಧ್ಯಾರಾಗಮೆತ್ತಂ ಪರಿಯೆ; ಬಲ್ಲಾಗಲಂಬಿಡಿದು ನೀನೆ ಗತಿಯೆಂದು ನನ್ನಿಯಿಂ ನಂಬಿದಳಂ ಮಱೆದು ಸವತಿಯೊಂದು ಪಿಸುಣ್ಗೆ ಎಱೆಯಿಂ ಮಾಱುವೋದನೆಂಬೊಂದುಬ್ಬೆಗದಿಂ ಕೊರಗಿದಳೆನೆ ಪದ್ಮಿನಿ ನಾಡೆ ಬಾಡೆ; ಬೇಡ ಗಡಾ! ಮುನಿಸು ನಿನಗಿನಿಯನೊಳಕ್ಕಟಾ ! ಬೇಟದ ಸೂಡಿಂ ಬಾಡಿ ಬಸಂಗೆಟ್ಟುದ'ನಿಂದು ನಿಂದುಕಾಂತೆಗೞುಪಿ ಬೞಿಯಟ್ಟುವೆವನಿತೊಂದು ಪೊಟ್ಟು ಸೈತಿರ್ಪುದೆಂದು ಸಂತಯಿಸಿ ದೂದುಪೋಪವೆನೆ ಮುಯ್ಯೀರಡಿಗಳೋಡೆ ; ಪಗಲ್ ಜಗುಟ್ಟುದು. ಪಕ್ಕಿಗಳೋರೊಂದೆಡೆಯ ಮೇಪಿಂ ತಣಿದುಂ ದಿನಾವಸಾನದೊಳಾಗಳಾಗಳ್ ಕಂಡ ಬಿನದಮನೊಳಗೊಳಗೆ ತಮ್ಮ ಬಳಗಕ್ಕೆ ತಿಳಿಪಿ ಸಲ್ಲಪಿಸುತೆ ಪೋಪುವೆನೆ ಮಂದಸ್ವರಂಬೆರೆಯೆ ಕುವಿದು ನಿಜಾಶ್ರಯಂಗಳಂ ಸಾರ್ದುವು. ಮತ್ತಂ ವಿಪ್ರರ್ ಎತ್ತಿದ ಸೇರೆಗೈಯೊಳ್ ಸಂಧ್ಯಾಮಂಡಪಮನಲಂಕರಿಸೆಯುಂ, ವೈಹಾಳಿಯನುೞಿದು ಬಾಹುಜನಿವಹಂ ಬೀಡಂ ಪುಗುತರೆಯುಂ, ಬೇರದವಸರದಿಂ ಮೆಯ್ದ್ದೆಗೆದು ಬಣಂಜಿಗರ ನೆರವಿ ತವುತವುಗೆ ಪೊಸವದಿನೆಣಿಕೆಯೊಳಿರೆಯುಂ, ಬವಸಿನೊಂದು ಕಜ್ಜಮಂ ತವಿಸಿ ಬೇಸರ್ಗೆ ಕುಡಿಯರ್ ಕಡುಸುಮ್ಮಾನದಿನೊಂದೆಡೆಯೊಳ್ ನೆರೆದು ಶ್ರೀರಾಮಲೀಲಾವಿನೋದಮಂ ಪಾಡುತಿರೆಯುಂ, ಬಾಲಕರ್ ಆಟಪಾಟಂಗಳಂ ಮಱೆದು ತಾಯ್ವಿರೊತ್ತಂ ಪತ್ತಿರೆಯುಂ, ಮುಚ್ಚಂಜೆ ಸೊಗಯಿಸಿದುದು.

**41.** ನಾಡು ಸಂತೋಷದಲ್ಲಿ ಓಲಾಡುವುದಕ್ಕೆ ಕಾರಣವೇನು ?

(A) ಸುಗ್ಗಿ ಬಂದದ್ದರಿಂದ

(B) ಗೆಲುವು ದೊರಕಿದ್ದರಿಂದ

(C) ಸೀತೆ ಗರ್ಭಿಣಿಯಾದದ್ದರಿಂದ

(D) ಕುಮಾರೋದಯವಾದದ್ದರಿಂದ

**42.** ಸೀತೆಯು ರಾಮನಲ್ಲಿ ಏನನ್ನು ಕೇಳಿಕೊಂಡಳು ?

(A) ವನದ ಆಶ್ರಮಗಳಲ್ಲಿ ಋಷಿಪತ್ನಿಯರೊಂದಿಗೆ ಸಲ್ಲಾಪ

(B) ವನ್ಯ ಪ್ರಾಣಿಗಳೊಂದಿಗೆ ಒಡನಾಟ

(C) ತನ್ನ ಪತಿಯೊಂದಿಗೆ ಸರಸಸಲ್ಲಾಪ

(D) ರಾಣಿವಾಸದೊಂದಿಗೆ ಸಹವಾಸ

**43.** ಭೂಸುರರಿಗೆ ದಾನದಕ್ಷಿಣೆಗಳನ್ನು ನೀಡಿದವರಾರು ?

(A) ಪರಿಜನ

(B) ಸುರಜನ

(C) ಬಂಧುಜನ

(D) ರಘುಪ್ರವರ

**44.** ಕುದುರೆಗಳು ಬಳಲಿದುದಕ್ಕೆ ಕಾರಣವೇನು ?

(A) ಕಡಲಿಗೆ ಇಳಿದುದು

(B) ಸಾರಥಿಯು ಹೊಡೆದುದು

(C) ಲೋಕಯಾತ್ರೆಗೈದುದು

(D) ಸತತವಾಗಿ ಪ್ರಯಾಣ ಮಾಡಿದುದು

**45.** 'ಕೆಂಬೆಳಕು' ಎಂಬ ಪದದ ವಿಗ್ರಹವಾಕ್ಯವನ್ನು ಗುರುತಿಸಿ.

(A) ಕೆಂಪು + ಬೆಳಕು

(B) ಕೆನ್ + ಬೆಳಕು

(C) ಕೆಚ್ಚನೆ + ಬೆಳಕು

(D) ಕೆಂಪಾದ + ಬೆಳಕು

**46.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಆನಂದವರ್ಧನ – ಕಾವ್ಯಾಲಂಕಾರ

(B) ಕುಂತಕ – ವಕ್ರೋಕ್ತಿ ಜೀವಿತಂ

(C) ಭಾಮಹ – ಕಾವ್ಯಾದರ್ಶ

(D) ವಾಮನ – ಧ್ವನ್ಯಾಲೋಕ

**47.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(A) ಕೆ. ವಿ. ಸುಬ್ಬಣ್ಣ – ಪಂಪನ ಕವಿತೆ ಅನುಸಂಧಾನಕ್ಕೆ ಮಾರ್ಗ

(B) ಗಿರಡ್ಡಿಗೋವಿಂದರಾಜ – ಜನಪದ ಕಾವ್ಯ

(C) ಡಿ. ಆರ್. ನಾಗರಾಜ – ವಸಾಹತೋತ್ತರ ಚಿಂತನೆ

(D) ಜಿ. ಎಚ್. ನಾಯಕ – ವಿನಯ ವಿಮರ್ಶೆ

**48.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಮದನ ಮೋಹನ ಮಾಲವೀಯರ ಚರಿತ್ರೆ – ಚಂದ್ರಶೇಖರ ಶಾಸ್ತ್ರಿಗಳು

(B) ದಿವಾನ ರಂಗಾಚಾರ್ಲು – ಕೆ. ವಿ. ಅಯ್ಯರ್

(C) ಶ್ರೀ ಕೈಲಾಸಂ ಸ್ಮರಣೆ – ಗೊರೂರು ರಾಮಸ್ವಾಮಿ ಅಯ್ಯಂಗಾರ್

(D) ಜಗತ್ತಿನ ಮಹದ್ವ್ಯಕ್ತಿಗಳು – ಡಿ. ವಿ. ಗುಂಡಪ್ಪ

**49.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(A) ಸೂರ್ಯನ ಕುದುರೆ, ಆಕಾಶ ಮತ್ತು ಬೆಕ್ಕು

(B) ಆವಾಹನೆ, ಅಜ್ಜನ ಹೆಗಲಸುಕ್ಕುಗಳು

(C) ಪ್ರಜ್ಞೆ ಮತ್ತು ಪರಿಸರ, ಪೂರ್ವಾಪರ

(D) ಸದ್ಯ ಮತ್ತು ಶಾಶ್ವತ, ವಾಲ್ಮೀಕಿಯ ನೆವದಲ್ಲಿ

**50.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಶಂಕರಿ – ಬೆಟ್ಟದ ಜೀವ

(B) ಜಯಂತಿ – ಜುಗಾರಿ ಕ್ರಾಸ್

(C) ಕಾಮಿನಿ – ಓಂಣಮೋ

(D) ಸೀತಾ – ಫಣಿಯಮ್ಮ

**51.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(A) ಶೂರಸೇನ ಚರಿತೆ – ಒಥೆಲೊ ದಿ ಮೂರ್ ಆಫ್ ವೆನಿಸ್

(B) ಪ್ರಮೀಳಾರ್ಜುನೀಯಂ – ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್

(C) ಹೇಮಚಂದ್ರ ರಾಜ ವಿಲಾಸ – ಮ್ಯಾಕ್‌ಬೆಥ್

(D) ರಾಮವರ್ಮ ಲೀಲಾವತಿ – ರೊಮಿಯೋ ಜೂಲಿಯಟ್

**52.** ಕೆಳಗಿನ ಜೋಡಿಗಳಲ್ಲಿ ಹೊಂದಾಣಿಕೆ ಆಗುವುದು

(A) ನಾಗಾಮಿ ಶಾಸನ – ಕ್ರಿ.ಶ. 1058

(B) ದೇಕಬ್ಬೆ ಶಾಸನ – ಕ್ರಿ.ಶ. 1080

(C) ಬುಕ್ಕರಾಯನ ಶಾಸನ – ಕ್ರಿ.ಶ. 1410

(D) ಲಕ್ಷ್ಮೀಧರನ ಶಾಸನ – ಕ್ರಿ.ಶ. 1368

**53.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(A) ಸುದಾಮೆ – ಸುಕುಮಾರ ಸ್ವಾಮಿಯ ಕಥೆ

(B) ವೀರಮತಿ – ಕಾರ್ತಿಕ ರಿಸಿಯ ಕಥೆ

(C) ವಸುಂಧರಿ – ಗಜಕುಮಾರನ ಕಥೆ

(D) ಅಭಯಮತಿ – ಸಿರಿದಿಣ್ಣನೆಂಬ ಭಟಾರನ ಕಥೆ

**54.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದು ?

(A) ಈಶ್ವರನೊಲವು – ವಿಭಕ್ತಿ ಸ್ವರಲೋಪಸಂಧಿ

(B) ವಿಧುವಿದು – ಪ್ರಕೃತಿ ಸ್ವರಲೋಪಸಂಧಿ

(C) ಕೋರಯಿಸಿದಂ – ಆದೇಶಸಂಧಿ

(D) ಅತ್ಯಂತ – ಆಗಮಸಂಧಿ

**55.** ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(A) ಶಂ. ಬಾ. ಜೋಶಿ – ಎಡೆಗಳು ಹೇಳುವ ಕಂನಾಡ ಕಥೆ

(B) ಶಿ. ಶಿ. ಬಸವನಾಳ – ಬಸವಣ್ಣನವರ ಷಟ್‌ಸ್ಥಲದ ವಚನಗಳು

(C) ಮ. ಪ್ರ. ಪೂಜಾರ – ಕನ್ನಡ ನುಡಿಗನ್ನಡಿ

(D) ಮುಳಿಯ ತಿಮ್ಮಪ್ಪಯ್ಯ – ಕವಿರಾಜಮಾರ್ಗ ಪ್ರಶಸ್ತಿ

**56.** ಕೆಳಗಿನವುಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಸಗರಚಕ್ರವರ್ತಿ – ಶಾಂತಿಪುರಾಣ

(B) ಭೀಮಸೇನ – ಆದಿಪುರಾಣ

(C) ಭರತ ಚಕ್ರವರ್ತಿ – ಅಜಿತ ತೀರ್ಥಂಕರ ಪುರಾಣ

(D) ಖರ – ಪಂಪರಾಮಾಯಣ

**57.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ ?

(A) ಬಿ. ಎಂ. ಶ್ರೀ – ಹೊಂಗನಸುಗಳು

(B) ಎಂ. ಗೋವಿಂದ ಪೈ – ಉಮರನ ಒಸಗೆ

(C) ಮಧುರ ಚೆನ್ನ – ನನ್ನ ನಲ್ಲ

(D) ದ. ರಾ. ಬೇಂದ್ರೆ – ಉತ್ತರಾಯಣ

**58.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಎಲ್. ಬಸವರಾಜು – ವಚನ ವಿನ್ಯಾಸ

(B) ಎಂ. ಆರ್. ಶ್ರೀನಿವಾಸಮೂರ್ತಿ – ವಚನ ಧರ್ಮಸಾರ

(C) ಎಂ. ಚಿದಾನಂದಮೂರ್ತಿ – ಶೂನ್ಯಸಂಪಾದನೆಯ ಪರಾಮರ್ಶೆ

(D) ಸಂ. ಶಿ. ಭೂಸನೂರಮಠ – ಶೂನ್ಯ ಸಂಪಾದನೆ ಕುರಿತು

**59.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ರಂ. ಶ್ರೀ. ಮುಗಳಿ – ಜೀವನ ರಸಿಕ

(B) ತ. ಸು. ಶಾಮರಾಯ – ನನಸಾಗದ ಕನಸು

(C) ಜೋಳದ ರಾಶಿ ದೊಡ್ಡನಗೌಡರು – ನಂದೇ ನಾನೋದಿದೆ

(D) ಬಸವರಾಜ ಕಟ್ಟೀಮನಿ – ಕಾದಂಬರಿಕಾರನ ಬದುಕು

**60.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಶಾಂತಲಿಂಗದೇಶಿಕ – ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ

(B) ಗುಬ್ಬಿಮಲ್ಲಣಾರ್ಯ – ಶಿವತತ್ವ ಚಿಂತಾಮಣಿ

(C) ನಿಜಗುಣ ಶಿವಯೋಗಿ – ಅನುಭವಾಮೃತ

(D) ಷಡಕ್ಷರದೇವ – ಭಾವಚಿಂತಾರತ್ನ

**61.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ಇರ್ಬಾಳ್ – ದ್ವಿಗು ಸಮಾಸ

(B) ಮಲ್ಲಿಗೆ ನನೆ – ತತ್ಪುರುಷ ಸಮಾಸ

(C) ಕಡುಚಾಗಿ – ಕರ್ಮಧಾರಯ ಸಮಾಸ

(D) ಬಳೆದೊಟ್ಟಂ – ಕ್ರಿಯಾ ಸಮಾಸ

**62.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುತ್ತದೆ ?

(A) ಚಾಮರಸ – ಕುಮಾರವ್ಯಾಸ

(B) ಲಕ್ಷ್ಮೀಶ – ರತ್ನಾಕರವರ್ಣಿ

(C) ಸರ್ವಜ್ಞ – ಭಾಸ್ಕರ್

(D) ಷಡಕ್ಷರ – ಪಾಯಣ್ಣವ್ರತಿ

**63.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ವಿಕ್ರಮ – ಸೊಬಗಿನ ಸೋನೆ

(B) ಶಂಬರಾಸುರ – ಮೋಹನ ತರಂಗಿಣಿ

(C) ಮಕರಂದಾಜಿ – ಭರತೇಶ ವೈಭವ

(D) ಕಂಜರೆ – ಕುಮಾರರಾಮ ಸಾಂಗತ್ಯ

**64.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದು ?

(A) ರಸೆಯೊಳ್ ಕಾಲಾಗ್ನಿರುದ್ರಂಜಲ ಶಯನದೊಳಂ ಭೋಜನಾಭಂಪೊದಳ್ದು – ಪಂಪ

(B) ಅಱಿಯೆಮೆ ಬಿಲ್ಲಬಿನ್ನಾಣಕೆ ಗಾಂಡಿವಿಯಲ್ತುಪಿನಾಕಪಾಣಿಯುಂ – ಪೊನ್ನ

(C) ಪುಲಿಯ ಮೀಸೆಯನಂಜದುಯ್ಯಲನಾಡಲಪ್ಪುದು – ರನ್ನ

(D) ಕಟ್ಟುಗೆ ಕಟ್ಟುದಿರ್ಕೆಕಡಲಂ ಕಪಿಸಂತತಿ, ವಾಮನಕ್ರಮಂ – ಜನ್ನ

**65.** ಇವುಗಳಲ್ಲಿ ಯಾವುದು ಹೊಂದಾಣಿಕೆ ಆಗುವುದಿಲ್ಲ?

(A) ಶಿವತತ್ತ್ವ ಚಿಂತಾಮಣಿ – ವಾರ್ಧಕಷಟ್ಪದಿ

(B) ಪರಮಾನುಭವ ಬೋಧೆ – ಸಾಂಗತ್ಯ

(C) ದೀಕ್ಷಾಬೋಧೆ – ರಗಳೆ

(D) ಜೀವಸಂಬೋಧನೆ – ಚಂಪೂ

**66.** ಬಹು ಆಯ್ಕೆಯ ಜೋಡಣೆಯ ಮಾದರಿ :

| | |
|---|---|
| a. ಬಸವಣ್ಣನವರ ಷಟ್‌ಸ್ಥಲದ ವಚನಗಳು | i. ಜಿ. ಎಸ್. ಆಮೂರ |
| b. ಕರ್ನಾಟಕ ಧರ್ಮಗಳು | ii. ಎಸ್. ಎಸ್. ಭೂಸನೂರ ಮಠ |
| c. ಕೊರಳು ಕೊಳಲು | iii. ಸಿ. ಎಸ್. ರಾಮಚಂದ್ರನ್ |
| d. ಆಖ್ಯಾನವ್ಯಾಖ್ಯಾನ | iv. ಎಸ್. ಸಿ. ನಂದೀಮಠ |
| | v. ಶಿ. ಶಿ. ಬಸವನಾಳ |

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | v | iii | iv | i |
| (B) | ii | iv | iii | i |
| (C) | ii | iii | iv | v |
| (D) | v | iv | i | iii |

**67.**

| | |
|---|---|
| a. ಶೃಂಗಾರ ರತ್ನಾಕರ | i. ತಿಮ್ಮಕವಿ |
| b. ಅಲಂಕಾರರಸ ಸಂಗ್ರಹ | ii. ಸಾಳ್ವ |
| c. ಕನ್ನಡ ಕುವಲಯಾನಂದ | iii. ಅಳಿಯ ಲಿಂಗರಾಜ |
| d. ನರಪತಿ ಚರಿತೆ | iv. ಕವಿಕಾಮ |
| | v. ಜಾಯೇಂದ್ರ |

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | ii | iii | i | iv |
| (B) | iv | i | v | iii |
| (C) | i | ii | iii | v |
| (D) | v | iii | i | ii |

**68.**

| | |
|---|---|
| a. ಶ್ರವಣಬೆಳಗೊಳದ ನಂದಿಸೇನಮುನಿಯ ಶಾಸನ | i. ಕ್ರಿ. ಶ. 1220 |
| b. ಕುವರಲಕ್ಷ್ಮನ ಶಾಸನ | ii. ಕ್ರಿ. ಶ. 7ನೇ ಶತಮಾನ |
| c. ಅರ್ಜುನವಾಡ ಶಾಸನ | iii. ಕ್ರಿ. ಶ. 1410 |
| d. ಲಕ್ಷ್ಮೀಧರನ ಶಾಸನ | iv. ಕ್ರಿ. ಶ. 1260 |
| | v. ಕ್ರಿ. ಶ. 1162 |

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | ii | i | iv | iii |
| (B) | i | ii | iii | v |
| (C) | iii | i | iv | v |
| (D) | ii | iii | v | iv |

**69.** a. ರುದ್ರಭಟ್ಟ — i. ರೇಚಣ ಚಮೂಪ
b. ಆಚಣ್ಣ — ii. ವೀರಬಲ್ಲಾಳ
c. ಪಾರ್ಶ್ವಪಂಡಿತ — iii. ಲಕ್ಷ್ಮೀಧರ
d. ನೇಮಿಚಂದ್ರ — iv. ರಟ್ಟ ಕಾರ್ತವೀರ್ಯ
v. ರಾಚಮಲ್ಲ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | ii | iii | i | v |
| (B) | i | ii | iii | iv |
| (C) | ii | i | iv | iii |
| (D) | iv | iii | ii | i |

**70.** ಹೊಂದಿಸಿ ಬರೆಯಿರಿ :

a. ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದರಂತೆ ಬಲ್ಲಿತ್ತು ಕಲಿಗೆ — i. ಆತಕೂರು ಶಾಸನ
b. ಮಾದಕ್ಷಿಣಾಪಥದ ಬಹುಶತಹವನಾಹವದುಳ್ ಪಶುಪ್ರದಾನ ಶೌರ್ಯೋದ್ಯಮ ಭರಿತೋನ್ — ii. ಲಕ್ಕುಂಡಿ ಶಾಸನ
c. ಸಿದ್ಧಶಿಲೆಯೊಳ್ತಮ್ಮ ಕುಲದೈವಮಾದ್ಯಂತ್ತ ಜಿನಬಿಂಬಂಗಳುಮಂ ಚಕ್ರೇಶ್ವರಿಯುಮಂ — iii. ಹಲ್ಮಿಡಿ ಶಾಸನ
d. ಆಸ್ಥಾನಮನಾಳ್ವ ಗೊರವನಾ ಕಲ್ಲಂ ಪೂಜಿಸದುಣ್ಡರಪ್ಪೊಡೆ ನಾಯಗೆಯ್ದ ಪಾಪಮಂ ಕೊಣ್ಡನ್ — iv. ಕುರಿಕ್ಯಾಲ ಶಾಸನ
v. ಬಾದಾಮಿ ಶಾಸನ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | v | iii | iv | i |
| (B) | iii | ii | v | iv |
| (C) | v | iv | iii | ii |
| (D) | i | ii | iv | v |

**71.** ಹೊಂದಿಸಿ ಬರೆಯಿರಿ :

a. Langue and Parole — i. ರೋಮನ್ ಯಾಕಬ್‌ಸನ್
b. Literary competence — ii. ಐ. ಎ. ರಿಚರ್ಡ್ಸ್
c. Impulses — iii. ಜೊನಾಥನ್ ಕಲ್ಲರ್
d. Historical sense — iv. ಎಫ್. ಡಿ. ಸಸ್ಯೂರ
v. ಟಿ. ಎಸ್. ಎಲಿಯಟ್

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | i | ii | iii | iv |
| (B) | ii | iii | iv | v |
| (C) | iv | iii | ii | v |
| (D) | iii | iv | v | i |

**72.** ಹೊಂದಿಸಿ ಬರೆಯಿರಿ :

a. ಕನ್ನಡದಲ್ಲಿ ಕಾವ್ಯ ತತ್ವ — i. ಎಂ. ವಿ. ಸೀತಾರಾಮಯ್ಯ
b. ಭಾರತೀಯ ಕಾವ್ಯ ಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ — ii. ದೇ.ಜ.ಗೌ.
c. ಕವಿರಾಜ ಮಾರ್ಗದ ಕಾವ್ಯಮೀಮಾಂಸೆ — iii. ಜಿ. ಎಸ್. ಶಿವರುದ್ರಪ್ಪ
d. ಕನ್ನಡ ಕವಿಗಳ ಕಾವ್ಯಕಲ್ಪನೆ — iv. ಕೆ. ಕೃಷ್ಣಮೂರ್ತಿ
v. ಸಿ. ಪಿ. ಕೆ.

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | v | iv | iii | i |
| (B) | iv | i | v | iii |
| (C) | ii | iii | iv | i |
| (D) | iv | v | ii | i |

**73.** a. ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ — i. ಅಲ್ಲಮ ಪ್ರಭು

b. ಎಸೆಯದಿರು ಎಸೆಯದಿರು ಕಾಮಾ ನಿನ್ನ ಬಾಣ ಹುಸಿಯಲೇಕೊ — ii. ಚೆನ್ನಬಸವಣ್ಣ

c. ಉದಯಾಸ್ತಮಾನ ವೆಂಬೆರಡು ಕೊಳಗದಲ್ಲಿ ಆಯುಷ್ಯವೆಂಬ ರಾಸಿ ಅಳೆದು ತೀರದ ಮುನ್ನ — iii. ಬಸವಣ್ಣ

d. ಗುಬ್ಬಿ ಹೆರರ ಮನೆಯ ತನ್ನಮನೆಯೆಂಬಂತೆ — iv. ಅಂಬಿಗರ ಚೌಡಯ್ಯ

v. ಅಕ್ಕಮಹಾದೇವಿ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | iii | i | v | ii |
| (B) | ii | iii | iv | v |
| (C) | i | ii | v | iii |
| (D) | iii | i | v | iv |

**74.** ಹೊಂದಿಸಿ ಬರೆಯಿರಿ :

a. ಶ್ರೀಪಾದರಾಯರು — i. ಗೀತಗೋಪಾಲ

b. ವಾದಿರಾಜ — ii. ತತ್ವ ಸುವಾಲಿ

c. ಕನಕದಾಸ — iii. ಭ್ರಮರಗೀತೆ

d. ಜಗನ್ನಾಥ ದಾಸ — iv. ಲಕ್ಷ್ಮಿ ಶೋಭಾನೆ

v. ಹರಿಭಕ್ತಿಸಾರ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | i | ii | iv | iii |
| (B) | iii | iv | v | ii |
| (C) | ii | i | iii | iv |
| (D) | iv | iii | ii | i |

**75.** ಹೊಂದಿಸಿ ಬರೆಯಿರಿ :

a. ಎಚ್. ಎಸ್. ಶಿವಪ್ರಕಾಶ — i. ಟಿಪ್ಪುಸುಲ್ತಾನ ಕಂಡ ಕನಸು

b. ಗಿರೀಶ್ ಕಾರ್ನಾಡ್ — ii. ಸುಲ್ತಾನ ಟಿಪ್ಪು

c. ಚಂದ್ರಶೇಖರ ಕಂಬಾರ — iii. ಆನಿಬಂತಾನಿ

d. ಚಂದ್ರಕಾಂತ ಕುಸನೂರ — iv. ಹುಲಿಯ ನೆರಳು

v. ನನ್ನ ತಂಗಿಗೊಂದು ಗಂಡು ಕೊಡಿ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | i | ii | iii | iv |
| (B) | ii | v | iv | iii |
| (C) | ii | i | iv | iii |
| (D) | iii | ii | i | v |

**76.** ಹೊಂದಿಸಿ ಬರೆಯಿರಿ :

a. ಆನಂದ ಕಂದ	i. ಎಂ. ಶಿವರಾಮ

b. ಕವಿಶಿಷ್ಯ	ii. ಬೆಟಗೇರಿ ಕೃಷ್ಣಶರ್ಮ

c. ಪರ್ವತವಾಣಿ	iii. ಪಂಜೆ ಮಂಗೇಶರಾಯರು

d. ರಾಶಿ	iv. ಪಿ. ನರಸಿಂಗರಾವ್

v. ಪು. ತಿ. ನರಸಿಂಹಾಚಾರ್

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | ii | iii | i | iv |
| (B) | ii | iii | iv | i |
| (C) | v | iv | ii | iii |
| (D) | iii | iv | ii | v |

**77.** ಹೊಂದಿಸಿ ಬರೆಯಿರಿ :

a. ಎಂ. ಎಸ್. ಪುಟ್ಟಣ್ಣ	i. ಅಂತರಂಗ

b. ಗಳಗನಾಥರು	ii. ಸುದರ್ಶನ

c. ಮುಳಿಯ ತಿಮ್ಮಪ್ಪಯ್ಯ	iii. ಪಶ್ಚಾತ್ತಾಪ

d. ದೇವುಡು	iv. ಅವರಿಲ್ಲದೂಟ

v. ಕಮಲಕುಮಾರಿ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | iv | v | iii | i |
| (B) | v | iii | ii | i |
| (C) | i | ii | iii | iv |
| (D) | iv | v | ii | i |

**78.** ಹೊಂದಿಸಿ ಬರೆಯಿರಿ :

a. ಕಿಟೆಲ್	i. ಶಾಕುಂತಲ ನಾಟಕ ವಿಮರ್ಶೆ

b. ಮುಳಿಯ ತಿಮ್ಮಪ್ಪಯ್ಯ	ii. ಸಾಹಿತ್ಯದ ವಿರಾಟ್ ಸ್ವರೂಪ

c. ಶಂ. ಬಾ. ಜೋಶಿ	iii. ಪಾರ್ತಿ ಸುಬ್ಬ

d. ದ. ರಾ. ಬೇಂದ್ರೆ	iv. ಎಡೆಗಳು ಹೇಳುವ ಕಂನಾಡ ಕಥೆ

v. ಹಳಗನ್ನಡ ವ್ಯಾಕರಣ ಸೂತ್ರಗಳು

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | ii | iii | iv | v |
| (B) | v | ii | iii | i |
| (C) | i | ii | iii | iv |
| (D) | v | iii | iv | ii |

**79.** ಹೊಂದಿಸಿ ಬರೆಯಿರಿ :

a. Ballad	i. ಕಟ್ಟುಕಥೆ

b. Marchen	ii. ಜನಪದ ಕಲೆ

c. Folklore	iii. ಲಾವಣಿ

d. Legend	iv. ಜಾನಪದ

v. ಐತಿಹ್ಯ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | iii | i | iv | v |
| (B) | ii | iii | i | v |
| (C) | i | iii | ii | iv |
| (D) | ii | iv | iii | i |

**80.** ಹೊಂದಿಸಿ ಬರೆಯಿರಿ :

a. ಕರ್ನಾಟಕ ಜನಪದ ರಂಗಭೂಮಿಯ ಮೂಲ ಮತ್ತು ಬೆಳವಣಿಗೆ — i. ಸೋಮಶೇಖರ ಇಮ್ರಾಪುರ

b. ಕನ್ನಡ ಒಗಟುಗಳು — ii. ಡಾ. ಚಂದ್ರಶೇಖರ ಕಂಬಾರ

c. ದಕ್ಷಿಣ ಕರ್ನಾಟಕ ಜನಪದ ರಂಗಭೂಮಿ — iii. ಡಾ. ನಂ. ತಪಸ್ವೀಕುಮಾರ

d. ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ — iv. ಡಾ. ಡಿ. ಕೆ. ರಾಜೇಂದ್ರ

v. ಡಾ. ಎಲ್. ಜಿ. ಸುಮಿತ್ರ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | i | ii | iii | iv |
| (B) | ii | i | iv | iii |
| (C) | iii | ii | v | iv |
| (D) | v | i | ii | iii |

**81.** a. ಭಟ್ಟರ್ಗ್ಗಗಟ್ಟಿ ಒಡ್ಡಲಿ ಆಪತ್ತೊನ್ದಿ ವಿಟ್ಟಾರಕರ — i. ಕುರಿಕ್ಯಾಲ ಶಾಸನ

b. ಪೋಗಿ ನೋಡ ಸುನ್ದರ ವೃಷಭಾಚಳೋನ್ನತ ಶಿಳಾತಳದೊಳ್ಬರೆದ ಕ್ಕರಂಗಳಂ — ii. ಕುವರಲಕ್ಷ್ಮ ಶಾಸನ

c. ಕಟಕ ಕಮಳಾರ್ಕ ವೆಸರ ತ್ರೈಪುರುಷ ದೇವರ ಶಾಲೆಯುಂ — iii. ಗೊಮ್ಮಟಸ್ತುತಿ ಶಾಸನ

d. ದಕ್ಷಿಣ ಕುಕ್ಕುಟೇಶ ತನುವಂ ಸಾಶ್ಚರ್ಯ ಸೌಂದರ್ಯಮಂ — iv. ಹಲ್ಮಿಡಿ ಶಾಸನ

v. ನಾಗಾಯಿ ಶಾಸನ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | v | ii | iii | i |
| (B) | ii | iii | i | v |
| (C) | iv | i | v | iii |
| (D) | iii | v | iv | i |

**82.** ಹೊಂದಿಸಿ ಬರೆಯಿರಿ :

a. ಮನಮಱಿದಂಜಿ ಬೆರ್ಚಿ ಬೆಸಕಯ್ ನಿಜವಲ್ಲಭನೇನ ನೆಂದೊಡಂ ಕಿನಿಸದಿರ್ — i. ದುರ್ಗಸಿಂಹ

b. ಜನಕಂಗೆ ಜಲಾಂಜಯಂ ತನೂಭವಂ ಕುಡುವುದು ಚಿತಮ್ — ii. ಷಡಕ್ಷರ ದೇವ

c. ಕಡುಮೂರ್ಖರ್ ತಮ್ಮಿಚ್ಚೆಗೆ ಹಿಡಿದುದೆ ಪಿರಿದೆಂಬರಣ್ಣ — iii. ಪಂಪ

d. ಕೊರಲಂ ಮೆಟ್ಟುವ ಪದದೊಳ್ ತುರಗಂ ಕಂಗೆಟ್ಟು ಜನನಿಯೆಂದೆನ್ನ ನೀಂ ಕರೆದೆಯೊ — iv. ರನ್ನ

v. ನಯಸೇನ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | i | ii | iii | iv |
| (B) | iii | iv | v | ii |
| (C) | v | ii | iii | i |
| (D) | iv | iii | ii | v |

**83.** ಹೊಂದಿಸಿ ಬರೆಯಿರಿ :

a. ಸಂದ ಕಾರಿರುಳ ಕನ್ನೆಯರು ಹಗಲಂ ನೋಡಲೆಂದು ಬಂದರೋ — i. ಲಕ್ಷ್ಮೀಶ

b. ಆರೊಡನೆ ಕಾದುವೆನು ಕೆಲಬರು ಹಾರುವರು ಕೆಲರಂತಕನ ನೆರೆಯಾರವರು — ii. ವಿರುಪಾಕ್ಷ ಪಂಡಿತ

c. ಕಡಲ ನೀರುಗಳೆಲ್ಲವಮೃತದ ಮಡುಗಳಾದಡೆಯಹವು — iii. ರಾಘವಾಂಕ

d. ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ಮುರಿದಿಳೆಗೊರಗುವಂತೆ — iv. ಕುಮಾರವ್ಯಾಸ

v. ಚಾಮರಸ

ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | i | ii | iii | iv |
| (B) | ii | iii | v | i |
| (C) | v | i | ii | iv |
| (D) | iii | iv | v | i |

**84.** ಹೊಂದಿಸಿ ಬರೆಯಿರಿ :

a. ವೀಣೆಯೊಳೊಮ್ಮೆ ತೋರುವಳು ರಾಗವ ತನ್ನ ಗೋಣೊಳಗೊಮ್ಮೆ ತೋರುವಳು — i. ಶಿಶುಮಾಯಣ

b. ದಿವ್ಯಾನ್ನದಿಂದ ದಿವ್ಯಾಭರಣಗಳಿಂದ ದಿವ್ಯಾಂಬರಾವಳಿಯಿಂದ ದಿವ್ಯ ಕುಸುಮದಿಂದ ದೇವನಾ — ii. ಸಂಚಿಯ ಹೊನ್ನಮ್ಮ

c. ಅರಸ ಕೇಳೆನಗೆ ನಿನ್ನಡಿಯೂಳಿಗ ಮೊಂದರಸಿಯರಡಿ- ಯೊಲ್ಮೆಯೊಂದು — iii. ಕನಕದಾಸ

d. ಓರಂತೆ ಮರಕಾಲು ಹಡಗಿನ ವ್ಯವಹಾರದಿಗಳಿಸಿದ ಹಣವ ಬಾರ ಸಂಖ್ಯೆಯಲಿ ತೂಗುವರು ಬೇಡಿದರೆ ಕುಬೇರಂಗೆ ಕಡವ ಕುಡುವರು — iv. ನಂಜುಂಡ

v. ರತ್ನಾಕರವರ್ಣಿ

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | v | iv | ii | iii |
| (B) | i | ii | iii | iv |
| (C) | iii | ii | i | v |
| (D) | v | iii | iv | i |

**85.** ಹೊಂದಿಸಿ ಬರೆಯಿರಿ :

a. ಆಗ ಬಡಿಯಿತು ಡೋಲು ಬಡಬಡ ಬಾಗಿ ಅರಸಿಗೆ ತಲೆಯನು — i. ಸಿದ್ಧಲಿಂಗಯ್ಯ

b. ಬಾಣಂತಿಯೆಲುಬ ಸಾಬಾಣದ ಬಿಳುಪಿನ ಕಾಣದ ಕಿರುಗೆಜ್ಜಿ ಕಾಲಾಗ ಇತ್ತೊ — ii. ಪಿ. ಲಂಕೇಶ

c. ನನ್ನವ್ವ ಫಲವತ್ತಾದ ಅಲ್ಲಿ ಹಸಿರು ಪತ್ರದ ಹರಹು ಬಿಳಿಯ ಹೂಹಬ್ಬ — iii. ಚಂದ್ರಶೇಖರ ಪಾಟೀಲ

d. ಪ್ರೀತಿಗೆ ಪ್ರತಿಯಾಗಿ ಕಡ್ಡಾಯವಾಗಿ ಪ್ರೀತಿಯನ್ನೂ ಬಯಸದೆ ಸುತ್ತಲಿನ ಸೃಷ್ಟಿಯನ್ನು ಕಣ್ತೆರೆದು ನೋಡುವ — iv. ದ. ರಾ. ಬೇಂದ್ರೆ

v. ಪಂಜೆ ಮಂಗೇಶರಾಯರು

**ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | iv | iii | ii | i |
| (B) | ii | iii | i | v |
| (C) | v | iv | ii | iii |
| (D) | iii | i | iv | ii |

**ಹೇಳಿಕೆ ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

86. **ಹೇಳಿಕೆ :** ಕಾಳಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತುಪಾದೇಯಮೆನಿಕ್ಕುಮೆ.

**ವಿವರಣೆ :** ಕಬ್ಬಿಣದಿಂದ ರಚಿಸಿದ ಹಾರವು ಬಂಗಾರದ ಹಾರದಂತೆ ಉಪಾದೇಯವೆನಿಸುವುದು.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ತಪ್ಪು

87. **ಹೇಳಿಕೆ :** ಕಿಡಿಕಿಱಿದಾದೊಡಂ ಸುಡದೆ ಕಾನನಮಂ ತರುಣಾರ್ಕನಾದೊಡೆ ಕಿಡಿಸನೆ ತೀವ್ರಮಪ್ಪ ತಮಮಂ.

**ವಿವರಣೆ :** ಬೆಂಕಿಯ ಕಿಡಿ ಸಣ್ಣದಿದ್ದರೂ ಕಾಡನ್ನು ಸುಡುವಂತೆ ಬಾಲಸೂರ್ಯನಾದರೂ ಕಗ್ಗತ್ತಲೆಯನ್ನು ಓಡಿಸದಿರುವನೆ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ತಪ್ಪು

88. **ಹೇಳಿಕೆ :** ಚಿತ್ತಗಟ್ಟಿದ ಹುತ್ತ ಮತ್ತೆ ಕೇತ್ತೀತೇನು ದಿವ್ಯರೂಪ ಪುರುಷೋತ್ತಮನ.

**ವಿವರಣೆ :** ಧ್ಯಾನಸ್ಥವಾಗದೆ ಮನಸ್ಸು, ರಾಮನಂತಹ ಪುರುಷೋತ್ತಮನ ವ್ಯಕ್ತಿತ್ವವನ್ನು ವರ್ಣಿಸಲಾಗುವುದೆ ?

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ತಪ್ಪು

89. **ಹೇಳಿಕೆ :** ಆವಗುಣಕ್ಕಮೀವ ಗುಣಮಗ್ಗಳಂ.

**ವಿವರಣೆ :** ಬೇರಾವುದೇ ಗುಣಗಳಿಗಿಂತ ದಾನನೀಡುವ ಗುಣವೇ ಶ್ರೇಷ್ಠವಾದುದು.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

**90.** **ಹೇಳಿಕೆ :** ತುಱು ಪರಿವಾಗಳೆಮ್ಮ ಪೆಣನಂ ತುೞಿಯದೆ ಪರಿಗುಂ.

**ವಿವರಣೆ :** ಹಸುಗಳು ಸಾಗುವಾಗ ನಮ್ಮ ಹೆಣಗಳನು ತುಳಿದು ಹೋಗಲಿ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ತಪ್ಪು

**91.** **ಹೇಳಿಕೆ :** ಕೞಿದವರ್ಗೞ್ವುದೞ್ತೊಡವರೇೞ್ವರೇ ?

**ವಿವರಣೆ :** ಸತ್ತವರಿಗಾಗಿ ಅತ್ತರೆ ಸತ್ತವರೇನು ಎದ್ದು ಬರುವರೆ ?

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ಸರಿ

**92.** **ಹೇಳಿಕೆ :** ಮನಸಿಜನೀಕೆಗಂಡು ರತಿಯಂ ಬಿಸುಟಂ.

**ವಿವರಣೆ :** ಈಕೆಯ ಸೌಂದರ್ಯವನ್ನು ಕಂಡು ಕಾಮನು ರತಿಯನ್ನು ಬಿಟ್ಟುಬಿಟ್ಟನೆ ?

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**93.** **ಹೇಳಿಕೆ :** ಕಸವಂ ಕಿೞ್ತಿಲ್ಲದ ಪೊಸ ಸಸಿಗಳ್ ಮೈಗೊಳ್ಳವು.

**ವಿವರಣೆ :** ಹೊಸಸಸಿಗಳು ಹುಟ್ಟಬೇಕಾದರೆ ಕಸವನ್ನು ಕೀಳಲೇಬೇಕು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**94.** **ಹೇಳಿಕೆ :** ಪದ್ಯಂ ಸಮಸ್ತ ಜನತಾ ಹೃದ್ಯಂ.

**ವಿವರಣೆ :** ಪದ್ಯ ಎಲ್ಲ ಜನತೆಗೂ ಪ್ರಿಯವಾಗುವುದಿಲ್ಲ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**95.** **ಹೇಳಿಕೆ :** ಪುರುಷಗನ್ನವನಿತ್ತು ಶೇಷಾನ್ನವನುಂಬ ತರುಣಿಯವಳೆ ಸ್ವರ್ಗಸರಣಿ.

**ವಿವರಣೆ :** ಗಂಡನಿಗೆ ಮೊದಲು ಉಣಬಡಿಸಿ ಉಳಿದದ್ದನ್ನು ಉಣ್ಣುವವಳೆ ಸ್ವರ್ಗಕ್ಕೆ ಅರ್ಹಳು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ಸರಿ, ವಿವರಣೆ ಸರಿ

**ಕಾಲಾನುಕ್ರಮಣಿಕೆ ಮಾದರಿ ಪ್ರಶ್ನೆಗಳು :**

**96.** (A) ನಂಜುಂಡ, ನಿಜಗುಣ ಶಿವಯೋಗಿ, ಚೆಲುವಾಂಬೆ, ಗೋವಿಂದ ವೈದ್ಯ
(B) ನಿಜಗುಣಶಿವಯೋಗಿ, ನಂಜುಂಡ, ಗೋವಿಂದ ವೈದ್ಯ , ಚೆಲುವಾಂಬೆ
(C) ಚೆಲುವಾಂಬೆ, ಗೋವಿಂದ ವೈದ್ಯ , ನಿಜಗುಣಶಿವಯೋಗಿ, ನಂಜುಂಡ
(D) ನಂಜುಂಡ, ಗೋವಿಂದ ವೈದ್ಯ , ಚೆಲುವಾಂಬೆ, ನಿಜಗುಣಶಿವಯೋಗಿ

**97.** (A) ಆಚಣ್ಣ, ಬಂಧುವರ್ಮ, ಮಹಾಬಲ, ಚಾವುಂಡರಸ
(B) ಬಂಧುವರ್ಮ, ಆಚಣ್ಣ, ಮಹಾಬಲ, ಚಾವುಂಡರಸ
(C) ಚಾವುಂಡರಸ, ಮಹಾಬಲ, ಬಂಧುವರ್ಮ, ಆಚಣ್ಣ
(D) ಮಹಾಬಲ, ಚಾವುಂಡರಸ, ಆಚಣ್ಣ, ಬಂಧುವರ್ಮ

**98.** (A) ಮಹಾದರ್ಶನ, ಅಂತರಂಗ, ಮಹಾಬ್ರಾಹ್ಮಣ, ಮಹಾಕ್ಷತ್ರಿಯ
(B) ಮಹಾಕ್ಷತ್ರಿಯ, ಮಹಾದರ್ಶನ, ಅಂತರಂಗ, ಮಹಾಬ್ರಾಹ್ಮಣ
(C) ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ, ಅಂತರಂಗ
(D) ಅಂತರಂಗ, ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನ

**99.** (A) ಸಂಜೆ ಐದರ ಮಳೆ, ನಾನೆಂಬ ಪರಕೀಯ, ನಿತ್ಯೋತ್ಸವ, ಮನಸ್ಸು ಗಾಂಧಿ ಬಜಾರ್
(B) ನಾನೆಂಬ ಪರಕೀಯ, ನಿತ್ಯೋತ್ಸವ, ಸಂಜೆ ಐದರ ಮಳೆ, ಮನಸ್ಸು ಗಾಂಧಿ ಬಜಾರ್
(C) ಮನಸ್ಸು ಗಾಂಧಿ ಬಜಾರ್, ಸಂಜೆ ಐದರ ಮಳೆ, ನಾನೆಂಬ ಪರಕೀಯ, ನಿತ್ಯೋತ್ಸವ
(D) ನಿತ್ಯೋತ್ಸವ, ಸಂಜೆ ಐದರ ಮಳೆ, ಮನಸ್ಸು ಗಾಂಧಿ ಬಜಾರ್, ನಾನೆಂಬ ಪರಕೀಯ

**100.** (A) ಬೆಂಬತ್ತಿದ ಕಣ್ಣು, ಋಷ್ಯಶೃಂಗ, ಚಾಳೇಶ ಮತ್ತು ನಾರ್ಸಿಸಸ್, ಜೋಕುಮಾರ ಸ್ವಾಮಿ
(B) ಜೋಕುಮಾರ ಸ್ವಾಮಿ, ಚಾಳೇಶ ಮತ್ತು ನಾರ್ಸಿಸಸ್, ಋಷ್ಯಶೃಂಗ, ಬೆಂಬತ್ತಿದ ಕಣ್ಣು
(C) ಋಷ್ಯಶೃಂಗ, ಬೆಂಬತ್ತಿದ ಕಣ್ಣು, ಜೋಕುಮಾರ ಸ್ವಾಮಿ, ಚಾಳೇಶ ಮತ್ತು ನಾರ್ಸಿಸಸ್
(D) ಚಾಳೇಶ ಮತ್ತು ನಾರ್ಸಿಸಸ್, ಋಷ್ಯಶೃಂಗ, ಬೆಂಬತ್ತಿದ ಕಣ್ಣು, ಜೋಕುಮಾರ ಸ್ವಾಮಿ

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work